RNU AIR DHARWAD

**JULY 27, 2024**

**AKASHAVANI - DHARWAD**

**PRADESH SAMACHARA (KANNADA) 7:05 AM**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು**

<><><>

- **ಕಾರ್ಗಿಲ್ ವಿಜಯ, ರಜತೋತ್ಸವ; ನಾಡಿನಾದ್ಯಂತ ವೀರ ಯೋಧರಿಗೆ ಶ್ರದ್ಧಾ ಸುಮನ, ಅರ್ಪಣೆ.**
- **ಧಾರವಾಡದ ಗಾಮನಗಟ್ಟಿಯಲ್ಲಿ, ಕೌಶಲಾಭಿವೃದ್ಧಿ ಸಂಸ್ಥೆಯ ಸ್ಥಾಪನೆಗೆ, ಜಾಗೆ ಮಂಜೂರು – ಎಚ್.ಕೆ. ಪಾಟೀಲ.**
- **ಬೆಳಗಾವಿ ಜಿಲ್ಲೆ, ಖಾನಾಪುರ ಕಾಡಂಚಿನ 15 ಹಳ್ಳಿಗಳಿಗೆ, ಶಾಶ್ವತ ಪುನರ್ವಸತಿ – ಸತೀಶ ಜಾರಕಿಹೊಳಿ.**
- **'ಸಿರಿಗನ್ನಡಂ ಗೆಲ್ಗೆ; ಶ್ರೀ ರಾ.ಹ. ದೇಶಪಾಂಡೆ ಪ್ರಶಸ್ತಿ'; ವೈದ್ಯ ಸಾಹಿತಿ, ಕಾಂತಾವರ ನಾ. ಮೊಗಸಾಲೆ ಅವರಿಗೆ ಇಂದು, ಪ್ರದಾನ.**

<><><>

**ಈಗ ವಾರ್ತೆಗಳ ವಿವರ**

<><><>

**ಪಾಕಿಸ್ಥಾನ ವಿರುದ್ಧದ ಕಾರ್ಗಿಲ್ ಯುದ್ಧದಲ್ಲಿ, ಭಾರತ ವಿಜಯಿಯಾದ, 25ನೇ ವರ್ಷಾಚರಣೆ ದೇಶಾದ್ಯಂತ, ಶ್ರದ್ಧೆ ಮತ್ತು ಅಭಿಮಾನದಿಂದ ಜರುಗಿತು.**

<><><>

**'ಕಾರ್ಗಿಲ್ ವಿಜಯ್ ದಿವಸ್' ಅಂಗವಾಗಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಲಡಾಖ್‌ನ ದ್ರಾಸ್ ವಲಯದ, ಕಾರ್ಗಿಲ್ ಯುದ್ಧ ಸ್ಮಾರಕಕ್ಕೆ ಭೇಟಿ ನೀಡಿ, ಕಾರ್ಗಿಲ್ ಯುದ್ಧದಲ್ಲಿ ಬಲಿದಾನಗೈದ ವೀರ ಯೋಧರಿಗೆ, ಗೌರವ ನಮನ ಸಲ್ಲಿಸಿದರು.**

<><><>

ಕಾರ್ಗಿಲ್ ವಿಜಯ ದಿನದ ಹಿನ್ನೆಲೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಹುತಾತ್ಮ ಸೈನಿಕರ ಸ್ಮಾರಕಕ್ಕೆ ಬೆಂಗಳೂರಿನಲ್ಲಿ, ಗೌರವ ನಮನ ಅರ್ಪಿಸಿದರು.

<><><>

ಕೊಡಗು ಜಿಲ್ಲೆ, ಮಡಿಕೇರಿಯಲ್ಲಿರುವ ಜನರಲ್ ತಿಮ್ಮಯ್ಯ ಸ್ಮಾರಕ ಭವನದ ಅಮರ್ ಜವಾನ್ ಸ್ಮೃತಿಗೆ, ಗೌರವಾರ್ಪಿಸಲಾಯಿತು.

<><><>

ಧಾರವಾಡ ಕಾರ್ಗಿಲ್ ಸ್ಮಾರಕ ಸಮಿತಿ, ಜಿಲ್ಲಾಧಿಕಾರಿ ಕಚೇರಿ ಆವರಣದ ಕಾರ್ಗಿಲ್ ಸ್ತೂಪದ ಬಳಿ, ಶೌರ್ಯಗಾಥೆ ಬಿಂಬಿಸುವ ವಿಶೇಷ ಕಾರ್ಯಕ್ರಮ ಆಯೋಜಿಸಿತ್ತು. ವಿಶ್ರಾಂತ ಮೇಜರ್ ಹಾಗೂ ಕಾರ್ಗಿಲ್ ಸೇನಾನಿ, ಸಿದ್ಧಲಿಂಗಯ್ಯ ಹಿರೇಮಠ, ವೀರ ಯೋಧರಿಗೆ ಗೌರವ ನಮನ ಸಲ್ಲಿಸಿ, ಮಾತನಾಡಿದರು.

<><><>

ಮೇಜರ್ ಸಿದ್ಧಲಿಂಗಯ್ಯ ಹಿರೇಮಠ ಧ್ವನಿ 41 ಸೆಕೆಂದುಗಳು

<><><>

ಭಾರತೀಯ ವಾಯು ಸೇನೆಯ ‘ಆಪರೇಷನ್ ಸಫೇದ ಸಾಗರ್’, ಕಾರ್ಗಿಲ್ ಯುದ್ಧದ ಸಂದರ್ಭದಲ್ಲಿ, ಹಿಮಾಲಯದ ಎತ್ತರದ ಪರ್ವತ ಶ್ರೇಣಿಗಳಲ್ಲಿ, ಅತ್ಯಂತ ಸವಾಲಿನ ಕೆಲಸವನ್ನು, ಕರಾರುವಾಕ್ ನಿರ್ವಹಿಸಿತು ಎಂದು, ವಿಶ್ರಾಂತ ಏರ್ ವೈಸ್ ಮಾ ’ಽಲ್ ಧನಂಜಯ ವಿ ಷ್ಣ ವಾಣಿ ಹೇಳಿದರು. ಹುಬ್ಬಳ್ಳಿ ಧಾರವಾಡ ವಾಯು ಸೇನೆ ಸಂಘ ಮತ್ತು ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದ ಸಹಯೋಗದಲ್ಲಿ, ಸೃಜನಾ ರಂಗಮಂದಿರದಲ್ಲಿ ಆಯೋಜಿಸಿದ್ದ, ‘ಕಾರ್ಗಿಲ್ ವಿಜಯ ದಿವಸ್’ ಕಾರ್ಯಕ್ರಮದಲ್ಲಿ, ‘ಕಾರ್ಗಿಲ್ ಯುದ್ಧದ ಕಾರ್ಯಾಚರಣೆ; ವಾಯು ಸೇನೆಯ ಪಾತ್ರ’ ಕುರಿತು ಮಾತನಾಡಿದರು. ಧಾರವಾಡ ವಿಭಾಗದ, ವಾಯು ಸೇನಾಧಿಕಾರಿಗಳ ಘಟಕದ ಉಪಾಧ್ಯಕ್ಷ, ವಿಶ್ರಾಂತ ಏರ್ ಕಮೋಡೋರ್ ಸಿ.ಎಸ್. ಹವಾಲ್ದಾರ್ ಮಾತನಾಡಿ, ವಾಯು ಸೇನೆ ದೇಶದ ರಕ್ಷಣೆಯಲ್ಲಿ ವಹಿಸುವ ಪಾತ್ರದ ಕುರಿತು, ಯುವ ಜನತೆ ತಿಳಿದುಕೊಳ್ಳಬೇಕು ಎಂದರು. ವಿಶ್ರಾಂತ ಸೇನಾಧಿಕಾರಿಗಳು ಭಾಗವಹಿಸಿದ್ದರು.

<><><>

ಧಾರವಾಡದ ಗಾಮನಗಟ್ಟಿ ಕೈಗಾರಿಕಾ ಪ್ರದೇಶದಲ್ಲಿ, ಕೌಶಲ ಅಭಿವೃದ್ಧಿ ತರಬೇತಿ ಸಂಸ್ಥೆ ಸ್ಥಾಪಿಸಲು, ಲೋಕ ಶಿಕ್ಷಣ ಟ್ರಸ್ಟ್‌ಗೆ 2 ಎಕರೆ 64 ಗುಂಟೆ ಜಮೀನು ಒದಗಿಸಲು, ರಾಜ್ಯ ಸಚಿವ ಸಂಪುಟ ಸಮ್ಮತಿಸಿದೆ. ಸಂಸದೀಯ ವ್ಯವಹಾರಗಳ ಖಾತೆ ಸಚಿವ ಎಚ್.ಕೆ.ಪಾಟೀಲ ಅವರು, ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯ ಬಳಿಕ, ಮಾಹಿತಿ ನೀಡಿದರು. 2017–18ನೇ ಸಾಲಿನ ಗೆಜೆಟೆಡ್ ಪ್ರೊಬೆಷನರ್ ನೇಮಕಾತಿ ಪರೀಕ್ಷೆಗೆ ಅರ್ಜಿ ಸಲ್ಲಿಸಿದ್ದ, ಎಲ್ಲ ಅಭ್ಯರ್ಥಿಗಳಿಗೆ, 2023–24ನೇ ಸಾಲಿನ ಪರೀಕ್ಷೆಗೆ ಅರ್ಜಿ ಸಲ್ಲಿಸಲು, ಒಂದು ಬಾರಿ ವಯೋಮಿತಿ ನಿರ್ಬಂಧ ಸಡಿಲಿಕೆಗೆ ಅನುಮತಿಸಲಾಗಿದೆ ಎಂದು ಅವರು ತಿಳಿಸಿದರು.

<><><>

ಬೆಳಗಾವಿ ಜಿಲ್ಲೆಯಲ್ಲಿ, ಅತಿವೃಷ್ಟಿ ಮತ್ತು ಪ್ರವಾಹ ಸಂಭವನೀಯತೆ ಹಿನ್ನಲೆ, ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ, ಖಾನಾಪುರ ತಾಲೂಕಿನ ಪ್ರವಾಹ ಪೀಡಿತ, ಪ್ರದೇಶಕ್ಕೆ ಭೇಟಿ ನೀಡಿ, ಪರಿಶೀಲಿಸಿದರು. ಬಳಿಕ, ಖಾನಾಪುರ ಪ್ರವಾಸಿ ಮಂದಿರದಲ್ಲಿ ಸಚಿವರನ್ನು ಭೇಟಿ ಮಾಡಿದ ಮಲಪ್ರಭಾ ನದಿ ತೀರದ ಹಿರೇ ಹಟ್ಟಿಹೊಳಿ ಗ್ರಾಮದ ಜನರು, ಸಂಪೂರ್ಣ ಗ್ರಾಮವೇ ಜಲಾವೃತಗೊಳ್ಳುವುದರಿಂದ, ಕೂಡಲೇ ಪರ್ಯಾಯ ವ್ಯವಸ್ಥೆ ಕಲ್ಪಿಸುವಂತೆ ಮನವಿ ಮಾಡಿಕೊಂಡರು. ಖಾನಾಪುರ ತಾಲೂಕಿನ, ಕಾಡಂಚಿನ 15 ಗ್ರಾಮಗಳನ್ನು ಪಟ್ಟಿ ಮಾಡಲಾಗಿದ್ದು, ಅವರಿಗೆ ಮೂಲ

ಸೌಕರ್ಯಗಳನ್ನು ಕಲ್ಪಿಸಿ, ಅಲ್ಲಿನ ಜನರನ್ನು ಸ್ಥಳಾಂತರಿಸುವ ಕುರಿತು ಯೋಜನೆ ರೂಪಿಸಲಾಗುವುದು ಎಂದು, ಸಚಿವ ಜಾರಕಿಹೊಳಿ ತಿಳಿಸಿದರು.

<><><>

ಇಂದಿನಿಂದ ಮೂರು ದಿನ, ಇ–ಸ್ವತ್ತು ತಂತ್ರಾಂಶವನ್ನು, ಸ್ಥಗಿತಗೊಳಿಸಲಾಗುತ್ತಿದೆ. ಜನರ ಅನುಕೂಲಕ್ಕಾಗಿ, ಹೊಸ ತಂತ್ರಾಂಶದ ಅವತರಣಿಕೆ ಅನು ಾನಗೊಳಿಸಲು, ಈ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಖಾತೆ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ. ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ, ಸಾರ್ವಜನಿಕರಿಗೆ ಆಗುತ್ತಿರುವ ಅನನುಕೂಲ ನಿವಾರಿಸಲು, ತಂತ್ರಾಂಶವನ್ನು ಉನ್ನತೀಕರಿಸಿ, ಅಳವಡಿಸಲಾಗುತ್ತಿದೆ. ತಂತ್ರಾಂಶ ಕಾರ್ಯಾರಂಭಿಸಿದ ನಂತರ, ಸೇವಾ ಅವಧಿಯನ್ನು, ಆಗಸ್ಟ್ 2 ರ ವರೆಗೆ ನಿತ್ಯ 8 ಗಂಟೆ ವರೆಗೂ ವಿಸ್ತರಿಸಲಾಗುವುದು. ಸಾರ್ವಜನಿಕರು ಸಹಕರಿಸಬೇಕು ಎಂದು, ಸಚಿವ ಖರ್ಗೆ ಮನವಿ ಮಾಡಿದ್ದಾರೆ. ಈ ತಂತ್ರಾಂಶದ ಮೂಲಕ, ಸಾರ್ವಜನಿಕರ ಆಸ್ತಿಯನ್ನು, ಗ್ರಾಮ ಠಾಣಾದ ಒಳಗೆ ಅಥವಾ ಹೊರಗೆ ಅಳತೆ ಮಾಡಿಸುವ ಪ್ರಕ್ರಿಯೆಯನ್ನು, ಗ್ರಾಮ ಪಂಚಾಯಿತಿಯ ಹಂತದಲ್ಲಿ, 'ದಿಶಾಂಕ್' ಆಪ್ ಮೂಲಕ ನಿರ್ವಹಿಸಲು, ಸಾಧ್ಯವಾಗಲಿದೆ ಎಂದು ಅವರು ಪ್ರಕಟಿಸಿದ್ದಾರೆ.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಭಾರತ ರತ್ನ, ಎ.ಪಿ.ಜೆ. ಅಬ್ದುಲ್ ಕಲಾಂ ಅವರ ಪುಣ್ಯ ತಿಥಿ ಇಂದು. ಭಾರತೀಯ ಬಾಹ್ಯಾಕಾಶ ಮತ್ತು ಮಿಲಿಟರಿ ಸಂಶೋಧನೆಯ ಪ್ರಗತಿಗೆ, ಮಹತ್ವದ ಕೊಡುಗೆ ನೀಡಿದ, ಅತ್ಯುತ್ತಮ ಶಿಕ್ಷಣ ತಜ್ಞರಲ್ಲಿ ಒಬ್ಬರು ಎಂದು, ಅವರನ್ನು ಗೌರವಿಸಲಾಗುತ್ತದೆ. ಇಂದು ಹಲವೆಡೆ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಿದ, ಮುನ್ಸುದ್ದಿಗಳು ಬಂದಿವೆ.

<><><>

ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ, 135ನೇ ಸಂಸ್ಥಾಪನಾ ದಿನಾಚರಣೆ ಅಂಗವಾಗಿ, ಇಂದು ಸಂಜೆ 5.30ಕ್ಕೆ 'ಸಿರಿಗನ್ನಡಂ ಗೆಲ್ಗೆ ಶ್ರೀ ರಾ.ಹ. ದೇಶಪಾಂಡೆ ಪ್ರಶಸ್ತಿ'ಯನ್ನು, ಕಾಂತಾವರ ಕನ್ನಡ ಸಂಘದ ಸಂಸ್ಥಾಪಕ ಅಧ್ಯಕ್ಷ ಡಾಕ್ಟರ್ ನಾ. ಮೊಗಸಾಲೆ ಅವರಿಗೆ, ವಿಧಾನ ಪರಿಷತ್ ಸದಸ್ಯ ಎಸ್. ವ್ಹಿ. ಸಂಕನೂರ ಪ್ರದಾನ ಮಾಡುವರು. ಧಾರವಾಡ ಆಕಾಶವಾಣಿ ಕಾರ್ಯಕ್ರಮ ಮುಖ್ಯಸ್ಥ ಬಸು ಬೇವಿನಗಿಡದ ಅಭಿನಂದನಾ ನುಡಿಗಳನ್ನಾಡುವರು. ಧಾರವಾಡದ ಶ್ರೀ ಮದ್ ಜಗದ್ಗುರು ಶಂಕರಾಚಾರ್ಯ ಸಂಸ್ಕೃತ ಪಾಠ ಶಾಲೆ ನಡೆದು ಬಂದ ದಾರಿಯನ್ನು, ಪ್ರಾಧ್ಯಾಪಕ ವಾಚಸ್ಪತಿ ಶಾಸ್ತ್ರಿ ಜೋಶಿ ಸ್ಮರಿಸುವರು.

<><><>

ಮಹಾತ್ಮ ಮೋಹನದಾಸ್ ಕರಮಚಂದ್ ಗಾಂಧಿ, 1924 ರಲ್ಲಿ ಬೆಳಗಾವಿಯಲ್ಲಿ ಜರುಗಿದ, ಅಖಿಲ ಭಾರತೀಯ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆ ವಹಿಸಿ, 100 ವ ್ಗಗಳು ತುಂಬಿದ ನೆನಪಿಗಾಗಿ, ರಾಜ್ಯದ ಹಲವೆಡೆ ಅರ್ಥಪೂರ್ಣ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು ಎಂದು, ಉಪ ಮುಖ್ಯಮಂತ್ರಿ ಹಾಗೂ ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ. ಬೆಂಗಳೂರಿನ ಕೆ.ಪಿ.ಸಿ.ಸಿ. ಕಚೇರಿಯಲ್ಲಿ, ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಾದಯಾತ್ರೆ ಪರಿಕಲ್ಪನೆ, ಮಹಾತ್ಮ ಗಾಂಧಿ ಅವರ ಕೊಡುಗೆ. ಕಾಂಗ್ರೆಸ್ ಅಧ್ಯಕ್ಷರಾಗಿ ಅವರು ನೀಡಿದ ಕೊಡುಗೆಯನ್ನು, ಪಕ್ಷ ಯಶಸ್ವಿಯಾಗಿ ನಿರ್ವಹಿಸಿದೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ, ದೇಶಾದ್ಯಂತ ನಡೆದ ಭಾರತ್ ಜೋಡೋ ನ್ಯಾಯ ಯಾತ್ರೆ, ಇದಕ್ಕೊಂದು ಉತ್ತಮ ಉದಾಹರಣೆ ಎಂದು ಅವರು ಹೇಳಿದರು.

<><><>

ಚಿತ್ರದುರ್ಗ ಜಿಲ್ಲೆಯಲ್ಲಿ, ಸಾವಿರದ 24 ಕ್ಷಯ ರೋಗಿಗಳಿದ್ದಾರೆ. 2024ರ ಜೂನ್ ವರೆಗೆ 27 ಸಾವಿರದ 702 ಜನರಿಗೆ ಕ್ಷಯ ರೋಗ ಪತ್ತೆ ಸಮೀಕ್ಷೆ ನಡೆಸಲಾಗಿದೆ. ಕ್ಷಯ ರೋಗ ಸೂಕ್ತ ಚಿಕಿತ್ಸೆಯಿಂದ, ಗುಣ ಪಡಿಸಬಹುದಾದ ರೋಗ ಎಂದು, ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿ ಡಾಕ್ಟರ್ ಸುಧಾ ಸಿ.ಓ., ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

ಡಾಕ್ಟರ್ ಸುಧಾ ಸಿ.ಓ., ಧ್ವನಿ 40 ಸೆಕೆಂದುಗಳು

<><><>

ಪ್ಯಾರಿಸ್ ಒಲಿಂಪಿಕ್ಸ್‌ನ ಉದ್ಘಾಟನಾ ಸಮಾರಂಭ ಸೀನ್ ನದಿಯ ಮೇಲೆ, ನಿನ್ನೆ, ಭಾರತೀಯ ಕಾಲಮಾನ, ರಾತ್ರಿ 11 ಗಂಟೆಗೆ ವರ್ಣರಂಜಿತವಾಗಿ ನೆರವೇರಿತು. ಭಾರತದ ಧ್ವಜಧಾರಿಗಳಾಗಿ ಶರತ್‌ಕಮಲ್ ಮತ್ತು ಪಿ.ವಿ.ಸಿಂಧು, 117 ಕ್ರೀಡಾಪಟುಗಳನ್ನು ಪ್ರತಿನಿಧಿಸಿದರು. ಕರ್ನಾಟಕದ 9 ಕ್ರೀಡಾಳುಗಳು ಈ ಕೂಟದಲ್ಲಿ ಸ್ಪರ್ಧಿಸುತ್ತಿದ್ದಾರೆ. ದೇಶವನ್ನು ಪ್ರತಿನಿಧಿಸುತ್ತಿರುವ ಕ್ರೀಡಾಪಟುಗಳಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಮಂತ್ರಿ ನರೇಂದ್ರ ಮೋದಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಅನೇಕ ಗಣ್ಯರು ಶುಭ ಕೋರಿದ್ದಾರೆ. ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಒಟ್ಟಾರೆ 206 ದೇಶಗಳ 10 ಸಾವಿರದ 500 ಕ್ರೀಡಾಪಟುಗಳು ಭಾಗವಹಿಸಿದ್ದಾರೆ. ಬಿಲ್ಲುಗಾರಿಕೆ ಸ್ಪರ್ಧೆಯ ಶ್ರೇಯಾಂಕ ಸುತ್ತಿನಲ್ಲಿ, ಅಂಕಿತಾ ಭಕತ್, ಭಜನ್ ಕೌರ್ ಮತ್ತು ದೀಪಿಕಾ ಕುಮಾರಿ ಅವರನ್ನೊಳಗೊಂಡ ಭಾರತೀಯ ಮಹಿಳಾ ತಂಡ, ಸಾವಿರದ 983 ಅಂಕಗಳೊಂದಿಗೆ, ನಾಲ್ಕನೇ ಸ್ಥಾನ ಗಳಿಸಿ, ಕ್ವಾರ್ಟರ್ ಫೈನಲ್ಸ್ ಹಂತ ಪ್ರವೇಶಿಸಿದೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಕರ್ನಾಟಕ ಜಾನಪದ ಪರಿ ತ್ತು ಮತ್ತು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಸಹಯೋಗದಲ್ಲಿ, ಜಿ.ಕೆ.ವಿ.ಕೆ ಆವರಣದ ಕೃಷಿ ಮೇಳ ಮೈದಾನದಲ್ಲಿ, ಇಂದು, 34ನೇ ರಾಜ್ಯ ಮಟ್ಟದ ಗಾಳಿಪಟ ಉತ್ಸವ ಮತ್ತು ಸ್ಪರ್ಧೆಯನ್ನು ಆಯೋಜಿಸಲಾಗಿದೆ.

<><><>

ಕೇಂದ್ರೀಯ ಮೀಸಲು ಪೊಲೀಸ್ ಪಡೆಯ 86ನೇ ಸಂಸ್ಥಾಪನಾ ದಿನಾಚರಣೆ ಇಂದು.

<><><>

ಮಂಡ್ಯ ಜಿಲ್ಲೆಯ ಕೆ.ಆರ್.ಎಸ್ ಅಣೆಕಟ್ಟೆಯಿಂದ, ಒಂದು ಲಕ್ಷ ಕ್ಯೂಸೆಕ್ ನೀರನ್ನು ಹರಿಬಿಟ್ಟ ಹಿನ್ನೆಲೆ, ಕಾವೇರಿ ನದಿ ಉಕ್ಕಿ ಹರಿಯುತ್ತಿದೆ. ಶ್ರೀರಂಗಪಟ್ಟಣದ ರಂಗನತಿಟ್ಟು ಪಕ್ಷಿಧಾಮ ಜಲಾವೃತವಾಗಿದೆ.

<><><>

ಆಹಾರ ಪದಾರ್ಥಗಳಲ್ಲಿ ಕಲಬೆರೆಕೆ ತಡೆಯಲು, ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ನಾಮನಿರ್ದೇಶನಗೊಂಡಿರುವ, ಸುಧಾ ಮೂರ್ತಿ ರಾಜ್ಯಸಭೆಯಲ್ಲಿ ಮನವಿ ಮಾಡಿದ್ದಾರೆ.

<><><>

ಹುಬ್ಬಳ್ಳಿಯ ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ – ಕಿಮ್ಸ್, ಆಡಳಿತ ಮಂಡಳಿ ಜೊತೆ, ವೈದ್ಯಕೀಯ ಶಿಕ್ಷಣ ಖಾತೆ ಸಚಿವ ಶರಣ ಪ್ರಕಾಶ ಪಾಟೀಲ, ವಿಕಾಸಸೌಧದಲ್ಲಿ ಸಭೆ ನಡೆಸಿದರು.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ನಾಳೆ ಆಕಾಶವಾಣಿಯಲ್ಲಿ, ತಮ್ಮ ಮನ್ ಕಿ ಬಾತ್ ನ 112 ಸಂಚಿಕೆ ಪ್ರಸ್ತುತ ಪಡಿಸಲಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಕಾರ್ಗಿಲ್ ವಿಜಯ, ರಜತೋತ್ಸವ; ನಾಡಿನಾದ್ಯಂತ ವೀರ ಯೋಧರಿಗೆ ಶ್ರದ್ಧಾ ಸುಮನ, ಅರ್ಪಣೆ.
- ಧಾರವಾಡದ ಗಾಮನಗಟ್ಟಿಯಲ್ಲಿ, ಕೌಶಲಾಭಿವೃದ್ಧಿ ಸಂಸ್ಥೆಯ ಸ್ಥಾಪನೆಗೆ, ಜಾಗೆ ಮಂಜೂರು – ಎಚ್.ಕೆ. ಪಾಟೀಲ.
- ಬೆಳಗಾವಿ ಜಿಲ್ಲೆ, ಖಾನಾಪುರ ಕಾಡಂಚಿನ 15 ಹಳ್ಳಿಗಳಿಗೆ, ಶಾಶ್ವತ ಪುನರ್ವಸತಿ – ಸತೀಶ ಜಾರಕಿಹೊಳಿ.
- 'ಸಿರಿಗನ್ನಡಂ ಗೆಲ್ಗೆ; ಶ್ರೀ ರಾ.ಹ. ದೇಶಪಾಂಡೆ ಪ್ರಶಸ್ತಿ'; ವೈದ್ಯ ಸಾಹಿತಿ, ಕಾಂತಾವರ ನಾ. ಮೊಗಸಾಲೆ ಅವರಿಗೆ ಇಂದು, ಪ್ರದಾನ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 9 ಗಂಟೆ 5 ನಿಮಿಷಕ್ಕೆ.

<><><>

ಹರ್ಷ